ಕರ್ನಾಟಕ ಸರ್ಕಾರ

ನಿರ್ದೇಶಕರ ಕಛೇರಿ, ಪದವಿ ಪೂರ್ವ ಶಿಕ್ಷಣ ಇಲಾಖೆ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ,
ಬೆಂಗಳೂರು-560 012.

ಸಂಖ್ಯೆ: ಪಪೂಶಿ/ಪರೀಕ್ಷೆ/ಮಾರ್ಚ್-2016/2015-16 ದಿನಾಂಕ: 24-03-2016

**ಪತ್ರಿಕಾ ಪ್ರಕಟಣೆ**

1. ದಿನಾಂಕ 21-03-2016ರಂದು ನಡೆಸಲಾದ ದ್ವಿತೀಯ ಪಿ.ಯು.ಸಿ. ರಸಾಯನಶಾಸ್ತ್ರ (ಹೊಸ ಪಠ್ಯಕ್ರಮ – NS) ಪ್ರಶ್ನೆ ಪತ್ರಿಕೆಯ ಸೋರಿಕೆ ಆಗಿರುವುದರಿಂದ, ಸದರಿ ವಿಷಯದ ಪರೀಕ್ಷೆಯನ್ನು ರದ್ದುಪಡಿಸಲಾಗಿತ್ತು ಮತ್ತು ಸದರಿ ವಿಷಯದ ಮರುಪರೀಕ್ಷೆಯನ್ನು ದಿನಾಂಕ 29-03-2016ರಂದು ನಡೆಸಲಾಗುವುದೆಂದು ಪದವಿ ಪೂರ್ವ ಶಿಕ್ಷಣ ಇಲಾಖೆಯಿಂದ ಪ್ರಕಟಿಸಲಾಗಿತ್ತು.

2. ಇಂದು ಕರ್ನಾಟಕ ವಿಧಾನ ಪರಿಷತ್ತಿನ ಸನ್ಮಾನ್ಯ ಉಪಸಭಾಪತಿಯವರಾದ ಶ್ರೀ ಮರಿತಿಬ್ಬೇಗೌಡರ ಅಧ್ಯಕ್ಷತೆಯಲ್ಲಿ, ವಿಧಾನ ಪರಿಷತ್ತಿನ ಸನ್ಮಾನ್ಯ ಸಭಾನಾಯಕರಾದ ಶ್ರೀ ಎಸ್.ಆರ್. ಪಾಟೀಲ್ ಮತ್ತು ಸನ್ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರಾದ ಶ್ರೀ ಕಿಮ್ಮನೆ ರತ್ನಾಕರ್‌ರವರ ಸಮ್ಮುಖದಲ್ಲಿ ವಿವಿಧ ಪಕ್ಷದ ವಿಧಾನಸಭೆ ಮತ್ತು ವಿಧಾನ ಪರಿಷತ್ತಿನ ಶಾಸಕರ ಸಭೆಯನ್ನು ನಡೆಸಲಾಯಿತು. ಈ ಸಭೆಯಲ್ಲಿ ದ್ವಿತೀಯ ಪಿ.ಯು.ಸಿ. ರಸಾಯನಶಾಸ್ತ್ರ ಮರುಪರೀಕ್ಷೆಯನ್ನು ಸೂಕ್ತ ದಿನಾಂಕದಂದು ನಡೆಸುವ ಬಗ್ಗೆ ಸುದೀರ್ಘವಾಗಿ ಚರ್ಚಿಸಲಾಯಿತು.

3. ಈ ವಿಷಯದ ಬಗ್ಗೆ ಎಲ್ಲಾ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಮರುಪರೀಕ್ಷೆಯನ್ನು ದಿನಾಂಕ 29-03-2016ರ ಬದಲಾಗಿ ದಿನಾಂಕ 31-03-2016ರಂದು ನಡೆಸಲು ಸರ್ವಾನುಮತದಿಂದ ಸಭೆಯಲ್ಲಿ ನಿರ್ಧರಿಸಲಾಯಿತು.

4. ಮೇಲೆ ವಿವರಿಸಿರುವ ನಿರ್ಣಯದನ್ವಯ ಸೂಚಿಸಿರುವಂತೆ ದ್ವಿತೀಯ ಪಿ.ಯು.ಸಿ. ರಸಾಯನಶಾಸ್ತ್ರ ಮರುಪರೀಕ್ಷೆಯನ್ನು ದಿನಾಂಕ 31-03-2016ರಂದು **ಗುರುವಾರ ಪೂರ್ವಾಹ್ನ 9.00 ರಿಂದ 12.15 ರವರೆಗೆ** ನಡೆಸಲಾಗುವುದು.

ನಿರ್ದೇಶಕರು,
ಪದವಿ ಪೂರ್ವ ಶಿಕ್ಷಣ ಇಲಾಖೆ